**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>**

**<u>ಉಪಸ್ಥಿತರು</u>**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕಡೂರು.

**ದಿನಾಂಕಃ 11 ನೇ ಜೂನ್ 2020**

**<u>ಅಸಲು ದಾವಾ ಸಂಖ್ಯೆ 71/2016</u>**

**ವಾದಿ/ಯರುಃ**

ತಾಯಮ್ಮ ಕೋಂ ಲೇಟ್ ಶಾಂತಮಲ್ಲಪ್ಪ, 78 ವರ್ಷ, ವ್ಯವಸಾಯಗಾರರು ವಾಸ ಹೆಚ್.ತಿಮ್ಮಾಪುರ ತಾಂಡ್ಯ ಗ್ರಾಮ, ಚೌಳಹಿರಿಯೂರು ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎಸ್.ಎನ್.ಗಿರೀಶ್, ನ್ಯಾಯವಾದಿಗಳು)

**-ವಿರುದ್ಧ-**

**ಪ್ರತಿವಾದಿ/ಯರುಃ**

ಕಮಲಮ್ಮ ಕೋಂ ಮಲ್ಲೇನಿಂಗಪ್ಪ ಮತ್ತು ಇತರೆ 7 ಜನರು, ಎಲ್ಲರೂ ವಾಸ ಃ ಚೌಳಹಿರಿಯೂರು ಗ್ರಾಮ ಮತ್ತು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(7 ನೇ ಪ್ರತಿವಾದಿ ಪರವಾಗಿ ಶ್ರೀ ಸಿ.ಜಿ.ಆರ್, ನ್ಯಾಯವಾದಿಗಳು.
1, 3, 5, 6 ನೇ ಪ್ರತಿವಾದಿಯರು ಏಕತರ್ಫಿಯಾಗಿರುತ್ತಾರೆ.)

****

**<u>ಮಧ್ಯಂತರ ಅರ್ಜಿ ಸಂಖ್ಯೆ- 6</u>**

**ಅರ್ಜಿದಾರರು ಃ** ಹೆಚ್.ಜಿ.ಮಹಾಲಿಂಗಪ್ಪ – 7 ನೇ ಪ್ರತಿವಾದಿ

**-ವಿರುದ್ಧ-**

**ಎದುರುದಾರರುಃ** ತಾಯಮ್ಮ

******

**ಮಧ್ಯಂತರ ಅರ್ಜಿ ಸಂಖ್ಯೆ - 6 ರ ಕುರಿತಾದ ಆದೇಶ**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ಪ್ರತಿವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರ ಅಡಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ತಿದ್ದುಪಡಿಯ ಅಂಶಗಳನ್ನು ಪ್ರತಿವಾದಪತ್ರದಲ್ಲಿ ಸೇರ್ಪಡೆ ಮಾಡಲು ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2. 7 ನೇ ಪ್ರತಿವಾದಿಯು ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆಃ-**

ನಾನು ಈ ಪ್ರಕರಣದ 7 ನೇ ಪ್ರತಿವಾದಿಯಾಗಿದ್ದು, ನನಗೆ ಪ್ರಕರಣದ ಕುರಿತು ಮಾಹಿತಿ ಇದೆ. ಇತರೆ ಪ್ರತಿವಾದಿಯರು ನನ್ನ ತಂದೆಯ ಸಹೋದರರ ಮಕ್ಕಳು ಮತ್ತು ಪತ್ನಿಯಾಗಿರುತ್ತಾರೆ. ವಾದಿಯು ಪ್ರಸ್ತುತ ಈ ದಾವೆಯನ್ನು ನನ್ನ ಮತ್ತು ಇತರೆ ಪ್ರತಿವಾದಿಯರ ದಾವಾ ಅನುಸೂಚಿತ ಎ-ಸ್ವತ್ತಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ ಬಿ-ಅನುಸೂಚಿತ ಸ್ವತ್ತಿನ ಸ್ವಾಧೀನತೆಯನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ದಾವಾ ಅನುಸೂಚಿತ ಬಿ-ಸ್ವತ್ತು ಎ-ಅನುಸೂಚಿತ ಸ್ವತ್ತಿನ ಒಂದು ಭಾಗವಾಗಿದ್ದು ಪ್ರತಿವಾದಿಯರು ಬಿ-ಅನುಸೂಚಿತ ಸ್ವತ್ತನ್ನು ಜನವರಿ 2015 ರಲ್ಲಿ ಒತ್ತುವರಿ ಮಾಡಿರುತ್ತಾರೆಂದು ವಿವಾದ ಮಾಡಿರುತ್ತಾರೆ. ವಾಸ್ತವಿಕವಾಗಿ ಹೆಚ್.ತಿಮ್ಮಾಪುರ ಗ್ರಾಮದ ಸರ್ವೆ ನಂ.1 ನಮ್ಮ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಸ್ವತ್ತಾಗಿದ್ದು ಸದರಿ ಸರ್ವೆ ನಂಬರಿನಲ್ಲಿ 34 ಗುಂಟೆ ಖರಾಬು ಸೇರಿದಂತೆ ಒಟ್ಟು 11 ಎಕರೆ 3 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನ ಉತ್ತರ ಭಾಗಕ್ಕೆ ನನ್ನ ಹಿಸ್ಸೆಯ ಜಮೀನು ಇದ್ದು, ಕಳೆದ 25 ವರ್ಷಗಳಿಂದ ನಾನು ಸದರಿ ಜಮೀನಿನಲ್ಲಿ ಸ್ವಾಧೀನತೆಯನ್ನು ಹೊಂದಿರುತ್ತೇನೆ. ನನಗಿಂತ ಪೂರ್ವದಲ್ಲಿ ನನ್ನ ತಂದೆ ಮತ್ತು ನನ್ನ

ಅಜ್ಜ ಸದರಿ ಜಮೀನಿನ ಸ್ವಾಧೀನತೆಯನ್ನು ಹೊಂದಿದ್ದರು. ಸದರಿ ಸ್ವತ್ತು ಬಿ-ಅನುಸೂಚಿತ ಸ್ವತ್ತನ್ನು ಸಹ ಒಳಗೊಂಡಿರುತ್ತದೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ 11 ಗುಂಟೆ ಜಮೀನು ಸೇರಿದಂತೆ ನನ್ನ ಜಮೀನಿನ ದಕ್ಷಿಣಕ್ಕೆ ಬದುವನ್ನು ನಿರ್ಮಿತಿ ಮಾಡಿಕೊಂಡಿದ್ದು ಸದರಿ ಬದು ಸುಮಾರು 80 ವರ್ಷಗಳಿಂದ ಇಂದಿಗೂ ಸಹ ಅಸ್ತಿತ್ವದಲ್ಲಿದೆ ಎಂದು ಹೇಳಿರುತ್ತೇನೆ. ನಾನು ಪ್ರಸ್ತುತ ಬಿ-ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿಕೂಲತೆಯ ಸ್ವಾಧೀನತೆಯ ಆಧಾರದಲ್ಲಿ ಪರಿಹಾರವನ್ನು ಕೋರಲು ಅರ್ಜಿಯನ್ನು ಸಲ್ಲಿಸುವಂತೆ ನನ್ನ ವಕೀಲರಿಗೆ ಸೂಚಿಸಿರುತ್ತೇನೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಪ್ರತಿಕೂಲ ಸ್ವಾಧೀನತೆಯ ಕುರಿತು ಸ್ಪಷ್ಟವಾದಂತಹ ನಮೂದನೆ ಇರುತ್ತದೆ. ಪ್ರಸ್ತಾವಿತ ತಿದ್ದುಪಡಿಯು ನನ್ನ ಪ್ರಕರಣವನ್ನು ಸಾಬೀತು ಪಡಿಸಲು ಹಾಗೂ ಪ್ರಕರಣದಲ್ಲಿನ ವಿವಾದಾಂಶಗಳನ್ನು ಪರಿಪೂರ್ಣವಾಗಿ ನಿರ್ವಹಿಸಲು ಅವಶ್ಯಕವಾಗಿರುತ್ತದೆ. ಈ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಎದುರು ಪಕ್ಷಗಾರರಿಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಬದಲಾಗಿ ಈ ಅರ್ಜಿಯನ್ನು ತಿರಸ್ಕರಿಸಿದರೆ ಪ್ರತಿವಾದಿಗೆ ತುಂಬಲಾರದ ಹಾನಿಯುಂಟಾಗುತ್ತದೆ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ-6 ಕ್ಕೆ ವಾದಿಯ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ :

7 ನೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯು ಕಾನೂನಿನ ಅಡಿಯಲ್ಲಾಗಲೀ ವಾಸ್ತವಿಕತೆಯ ಅಡಿಯಲ್ಲಾಗಲೀ ಊರ್ಜಿತವಾಗುವುದಿಲ್ಲ. ಪ್ರತಿವಾದಿಯು ತಮ್ಮ ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ. 7 ನೇ ಪ್ರತಿವಾದಿಯು ಈಗಾಗಲೇ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರತಿವಾದ ಪತ್ರದಲ್ಲಿ ವಾದಿಗೆ ಸಂಬಂಧಿಸಿದ ಬಿ-ಅನುಸೂಚಿತ ಸ್ವತ್ತಿನ ಕುರಿತಾದ ಮಾಲೀಕತ್ವವನ್ನು ಅಲ್ಲಗಳೆದಿರುತ್ತಾರೆ. ಆದರೆ ಪ್ರಸ್ತುತ ಪ್ರಸ್ತಾವಿತ ತಿದ್ದುಪಡಿಯ ಮೂಲಕ ಪ್ರತಿವಾದ ಪತ್ರದಲ್ಲಿ ಒಪ್ಪಿಕೊಂಡಂತಹ ಅಂಶವನ್ನು ಹಿಂದಕ್ಕೆ ಪಡೆಯಲು

ಹಾಗೂ ಒಪ್ಪಿಕೊಂಡಂತಹ ಅಂಶಗಳಿಗೆ ವ್ಯತಿರಿಕ್ತವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಕೋರಿರುತ್ತಾರೆ. ಪ್ರಸ್ತಾವಿತ ತಿದ್ದುಪಡಿಯು ಕಾಲಪರಿಮಿತಿಯನ್ನು ಮೀರಿದ್ದಾಗಿರುತ್ತದೆ. ಅಂತೆಯೇ ಪ್ರಕರಣದ ವಿಲೇವಾರಿಗೆ ಪ್ರಸ್ತಾವಿತ ತಿದ್ದುಪಡಿಯ ಅಗತ್ಯತೆ ಇರುವುದಿಲ್ಲ. ಈ ಪ್ರಕರಣದಲ್ಲಿ ಈಗಾಗಲೇ ವಾದಿಯ ಮುಖ್ಯ ವಿಚಾರಣೆ ಮುಗಿದಿದ್ದು ಆತನನ್ನು ಭಾಗಶಃ ಪಾಟೀ ಸವಾಲು ಮಾಡಿದ್ದು ಈ ಹಂತದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯು ಪ್ರತಿಕೂಲ ಸ್ವಾಧೀನತೆಯ ಆಧಾರದಲ್ಲಿ ಬಿ-ಅನುಸೂಚಿತ ಸ್ವತ್ತಿನ ಕುರಿತಾಗಿ ಹಕ್ಕನ್ನು ಕೋರುತ್ತಿದ್ದಾರೆ. ವಾದಿಯ ಪ್ರಕರಣದಂತೆ ಬಿ-ಅನುಸೂಚಿತ ಸ್ವತ್ತು ಎ-ಅನುಸೂಚಿತ ಸ್ವತ್ತಿನ ಒಂದು ಭಾಗವಾಗಿರುತ್ತದೆ. ಒಮ್ಮೆ ಸ್ವತ್ತಿನ ಮಾಲೀಕತ್ವವನ್ನು ಅಲ್ಲಗಳೆದಲ್ಲಿ ಪ್ರತಿಕೂಲತೆಯ ಸ್ವಾಧೀನತೆಯ ಆಧಾರದಲ್ಲಿ ಮಾಲೀಕತ್ವದ ಹಕ್ಕನ್ನು ಕೋರಲು ಬರುವುದಿಲ್ಲ. ವಾದಿಗೆ ಮೇಲ್ಕಂಡ ಅಂಶವು 2015 ರಲ್ಲಿ ತಿಳಿದುಬಂದಿರುತ್ತದೆ. ಹಾಗಾಗಿ ನ್ಯಾಯಾಲಯವು ವಿವಾದಾಂಶವನ್ನು ರೂಪಿಸಿರುವಂತೆ ಪ್ರಸ್ತಾವಿತ ತಿದ್ದುಪಡಿಯ ಅಗತ್ಯತೆ ಇರುವುದಿಲ್ಲ. ಒಂದೊಮ್ಮೆ ನ್ಯಾಯಲಯವು ಪ್ರಸ್ತಾವಿತ ತಿದ್ದುಪಡಿಗೆ ಅನುಮತಿಯನ್ನು ನೀಡಿದರೂ ದಾವೆಯ ಸ್ವರೂಪವೇ ಬದಲಾಗುತ್ತದೆ. ಪ್ರಸ್ತಾವಿತ ತಿದ್ದುಪಡಿಯು ಹೊಸದಾಗಿ ಕಂಡುಬಂದಿರುವಂತಹ ವಾಸ್ತವಾಂಶವಾಗಿರುವುದಿಲ್ಲ ಅಥವಾ ಇತ್ತೀಚೆಗೆ ಸಂಭವಿಸಿದ ಘಟನೆಯೂ ಆಗಿರುವುದಿಲ್ಲ. ಹಾಗಾಗಿ ಪ್ರಸ್ತಾವಿತ ತಿದ್ದುಪಡಿಯ ಅಗತ್ಯತೆ ಇರುವುದಿಲ್ಲ. ಪ್ರಸ್ತಾವಿತ ತಿದ್ದುಪಡಿಯನ್ನು ಪರಿಗಣಿಸುವಂತಹ ಯಾವುದೇ ಅಂಶಗಳನ್ನು ಸಹ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ಈ ಅರ್ಜಿಯನ್ನು ಕಾಲವಿಳಂಬ ಮಾಡಲು ಮತ್ತು ವಾದಿಯರಿಗೆ ತೊಂದರೆ ನೀಡಲು ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-6ನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ :

1) 7 ನೇ ಪ್ರತಿವಾದಿ/ಅರ್ಜಿದಾರ ಮಧ್ಯಂತರ ಅರ್ಜಿ ಸಂಖ್ಯೆ-6 ರಲ್ಲಿ ನಮೂದಿಸಿರುವಂತೆ ಪ್ರತಿವಾದಪತ್ರವನ್ನು ತಿದ್ದುಪಡಿ ಮಾಡಲು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2) ಹಾಗಿದ್ದಲ್ಲಿ ಯಾವ ಆದೇಶ?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ ಃ

ಅಂಶ – 1 ಃ ಸಕಾರಾತ್ಮಕವಾಗಿ,

ಅಂಶ – 2 ಃ ಅಂತಿಮ ಆದೇಶದಂತೆ,

**ಕಾ ರ ಣ ಗ ಳು**

7. ಅಂಶ – 1 ಃ- ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಹಾಗೂ ಸ್ವಾಧೀನತೆಯನ್ನು ಕೋರಿ ಸಲ್ಲಿಸಿರುತ್ತಾರೆ.

8. ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು 7 ನೇ ಪ್ರತಿವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರ ಅಡಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ತಿದ್ದುಪಡಿಯ ಅಂಶಗಳನ್ನು ಪ್ರತಿವಾದಪತ್ರದಲ್ಲಿ ಸೇರ್ಪಡೆ ಮಾಡಲು ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ. ಸದರಿ ತಿದ್ದುಪಡಿ ಮೂಲಕ ದಾವಾ ಅನುಸೂಚಿತ ಬಿ-ಸ್ವತ್ತಿನ ಕುರಿತಾಗಿ ಪ್ರತಿಕೂಲ ಸ್ವಾಧೀನತೆಯ ಆಧಾರದಲ್ಲಿ ಮಾಲೀಕತ್ವವನ್ನು ಕೋರಿ ಸಲ್ಲಿಸಿರುತ್ತಾರೆ.

9. ಪ್ರಸ್ತುತ ಮಧ್ಯಂತರ ಅರ್ಜಿಯ ಕುರಿತು 7 ನೇ ಪ್ರತಿವಾದಿ ಪರ ವಕೀಲರು ಈಗಾಗಲೇ 7 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಸ್ಪಷ್ಟವಾಗಿ ತನಗೆ

ಸೇರಿದಂತಹ ಜಮೀನಿನ ಕುರಿತು ನಮೂದು ಮಾಡಿದ್ದು ಅದಕ್ಕೆ ಪೂರಕವಾಗಿ ಪ್ರಸ್ತಾವಿತ ತಿದ್ದುಪಡಿಯ ಮೂಲಕ ಬಿ-ಅನುಸೂಚಿತ ಸ್ವತ್ತಿನ ಕುರಿತಾಗಿ ಪ್ರತಿಕೂಲ ಸ್ವಾಧೀನತೆಯ ಆಧಾರದಲ್ಲಿ ಮಾಲೀಕತ್ವದ ಹಕ್ಕನ್ನು ಘೋಷಿಸುವಂತೆ ಕೋರಿರುವುದಾಗಿ ಹೇಳಿರುತ್ತಾರೆ. ಸದರಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಲು ಉಂಟಾಗಿರುವ ವಿಳಂಬದ ಕುರಿತು ದಾವೆಯನ್ನು ಸಲ್ಲಿಸುವ ಕಾಲಕ್ಕೆ ಈ ಕಾನೂನಿನ ಕುರಿತಾಗಿ ವಕೀಲರಿಗೆ ಮಾಹಿತಿಯನ್ನು ನೀಡಲು ಸಾಧ್ಯವಾಗಿರುವುದಿಲ್ಲವೆಂದು ಹಾಗಾಗಿ ಪ್ರಸ್ತುತ ಈ ಕುರಿತು ಮಾಹಿತಿಯನ್ನು ನೀಡಿರುವುದಾಗಿ ಹೇಳಿರುತ್ತಾರೆ. ಅಲ್ಲದೆಯೇ ತಿದ್ದುಪಡಿ ಮೂಲಕ ಬಿ-ಅನುಸೂಚಿತ ಸ್ವತ್ತಿನ ಕುರಿತು ಪ್ರತಿಕೂಲತೆಯ ಸ್ವಾಧೀನತೆಯ ಆಧಾರದಲ್ಲಿ ಹಕ್ಕನ್ನು ಕೋರುತ್ತಿದ್ದು, ಈ ಅರ್ಜಿಯನ್ನು ಪುರಸ್ಕರಿಸುವುದರಿಂದ ಉಭಯ ಪಕ್ಷಗಾರರ ನಡುವಣ ವಿವಾದಾಂಶಗಳ ಕುರಿತು ಪರಿಪೂರ್ಣ ನಿರ್ಣಯವನ್ನು ನೀಡಬಹುದು ಎಂದು ಅಂತೆಯೇ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯಲು ಮತ್ತು ಪಕ್ಷಗಾರರ ದಾವಾ ವೆಚ್ಚವನ್ನು ಕಡಿಮೆ ಮಾಡಲು ಕೂಡ ಪೂರಕವಾಗಿರುತ್ತದೆ ಎಂದು ಉಲ್ಲೇಖಿಸಿರುತ್ತಾರೆ. ಅಲ್ಲದೇ ಈ ಅರ್ಜಿಯನ್ನು ಪುರಸ್ಕರಿಸುವುದರಿಂದ ದಾವೆಯ ಸ್ವರೂಪದಲ್ಲಿ ಯಾವುದೇ ಬದಲಾವಣೆ ಉಂಟಾಗುವುದಿಲ್ಲವೆಂದು ಎಲ್ಲಕ್ಕಿಂತ ಮುಖ್ಯವಾಗಿ ಎದುರು ಪಕ್ಷಗಾರನಿಗೆ ಯಾವುದೇ ಹಾನಿಕಾರಕ ಪರಿಣಾಮ ಬೀರುವುದಿಲ್ಲವೆಂದು ವಾದವನ್ನು ಮಂಡಿಸಿರುತ್ತಾರೆ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಿ ಪ್ರಸ್ತಾವಿತ ತಿದ್ದುಪಡಿ ಮೂಲಕ ಸೇರ್ಪಡೆ ಮಾಡಲು ಅನುಮತಿಯನ್ನು ನೀಡಬೇಕೆಂದು ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ.

10. ಇದಕ್ಕೆ ಪ್ರತಿಯಾಗಿ ವಾದಿಯ ಪರ ವಕೀಲರು 7ನೇ ಪ್ರತಿವಾದಿಯು ಈ ಅರ್ಜಿಯನ್ನು ವಿಳಂಬಕಾರಿಯಾಗಿ ಸಲ್ಲಿಸಿದ್ದಾಗಿರುತ್ತದೆ ಎಂದು ಹಾಗೂ 7ನೇ ಪ್ರತಿವಾದಿಯು ತನ್ನ ತಿದ್ದುಪಡಿ ಅರ್ಜಿಯ ಮೂಲಕ ಕೋರಿರುವ ಪರಿಹಾರವು ಕಾಲಪರಿಮಿತಿಯನ್ನು ಮೀರಿರುವುದರಿಂದ ಪರಿಗಣಿಸಲು ಬರುವುದಿಲ್ಲವೆಂದು ಹಾಗಾಗಿ ಈ ಅರ್ಜಿಯನ್ನು ಪುರಸ್ಕರಿಸಿದರೆ ವಾದಿಗೆ ತುಂಬಲಾರದ ಹಾನಿಯುಂಟಾಗುತ್ತದೆ

ಎಂದು ವಾದವನ್ನು ಮಂಡಿಸಿರುತ್ತಾರೆ. ಅಲ್ಲದೇ 7 ನೇ ಪ್ರತಿವಾದಿಯು ಪ್ರತಿವಾದಪತ್ರ ಸಲ್ಲಿಸಿದ 3 ವರ್ಷಗಳ ನಂತರ ಈ ಅರ್ಜಿಯನ್ನು ಸಲ್ಲಿಸುತ್ತಿದ್ದು, ಸದರಿ ಅರ್ಜಿಯು ಕಾಲಪರಿಮಿತಿಯನ್ನು ಮೀರಿರುತ್ತದೆ ಎಂದು ವಾದವನ್ನು ಮಂಡಿಸಿರುತ್ತಾರೆ. ಆದ್ದರಿಂದ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

11. ಮೇಲ್ಕಂಡ ಉಭಯ ಪಕ್ಷಗಾರರ ಹೇಳಿಕೆಗಳನ್ನು ಪರಿಶೀಲಿಸಲಾಗಿ ಈ ಪ್ರಕರಣದಲ್ಲಿ ಈಗಾಗಲೇ ಉಭಯ ಪಕ್ಷಗಾರರು ವಾದ ಪ್ರತಿವಾದಪತ್ರವನ್ನು ಸಲ್ಲಿಸಿ ವಿವಾದಾಂಶಗಳು ರೂಪಿತವಾಗಿ ವಾದಿಯ ಪರವಾಗಿ ವಾದಿಯು ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ಸಾಕ್ಷ ಮಾಡಿಸಿದ್ದು, ಸದರಿ ಸಾಕ್ಷಿಯನ್ನು ಪಾಟೀ ಸವಾಲು ನಿಗದಿಪಡಿಸಿದ್ದು, ಈ ಹಂತದಲ್ಲಿ ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ಸಲ್ಲಿಸಿರುತ್ತಾರೆ.

12. ವಾದಿಯು ಈ ಪ್ರಕರಣವನ್ನು ದಾವಾ ಅನುಸೂಚಿತ ಎ-ಸ್ವತ್ತಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಹಾಗೂ ಬಿ-ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಸ್ವಾಧೀನತೆಯನ್ನು ಕೋರಿ ಸಲ್ಲಿಸಿರುತ್ತಾರೆ. 7 ನೇ ಪ್ರತಿವಾದಿಯು ಈ ಪ್ರಕರಣದಲ್ಲಿ ದಿನಾಂಕ 17.06.2016 ರಂದು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ 11.08.2016 ರಂದು ವಿವಾದಾಂಶಗಳನ್ನು ರೂಪಿಸಿರುತ್ತದೆ. ನಂತರದಲ್ಲಿ ವಾದಿಯು ತನ್ನ ಪರವಾಗಿ ಮುಖ್ಯ ವಿಚಾರಣೆಯನ್ನು ಮಾಡಿದ್ದು ಸದರಿ ಸಾಕ್ಷಿಯನ್ನು ಪ್ರತಿವಾದಿ ಪರ ವಕೀಲರು ಭಾಗಶಃ ಪಾಟೀ ಸವಾಲು ಮಾಡಿರುತ್ತಾರೆ.

13. 7 ನೇ ಪ್ರತಿವಾದಿಯು ಪ್ರಸ್ತಾವಿತ ತಿದ್ದುಪಡಿಯ ಮೂಲಕ ತನ್ನ ತಂದೆ, ಅಜ್ಜ ಹಾಗೂ ನಂತರದಲ್ಲಿ ನಾನು ಸುಮಾರು 80 ವರ್ಷಗಳಿಂದ ಬಿ-ಅನುಸೂಚಿತ ಸ್ವತ್ತಿನ ಕುರಿತಾಗಿ ಶಾಂತಿಯುತ ನಿರಂತರತೆಯಿಂದ ಕೂಡಿದ ಯಾವುದೇ ಅಡಚಣೆಯಿಲ್ಲದೆ

ಮುಕ್ತವಾಗಿ ಸಾರ್ವಜನಿಕರಿಗೆ ಮತ್ತು ಬಿ-ಅನುಸೂಚಿತ ಸ್ವತ್ತಿನ ಮಾಲೀಕರಿಗೆ ತಿಳಿದಿರುವಂತೆ ಸ್ವಾಧೀನತೆಯನ್ನು ಹೊಂದಿದ್ದು ಹಾಗಾಗಿ ತಾನು ಪ್ರತಿಕೂಲತೆಯ ಸ್ವಾಧೀನತೆಯ ಆಧಾರದಲ್ಲಿ ಬಿ-ಅನುಸೂಚಿತ ಸ್ವತ್ತಿನ ಮಾಲೀಕತ್ವವನ್ನು ಹೊಂದಿರುವುದಾಗಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಪ್ರತಿವಾದಿಯು ಸಲ್ಲಿಸಿರುವಂತಹ ಪ್ರತಿವಾದ ಪತ್ರದಲ್ಲಿ ವಾದಿಗೆ ಸಂಬಂಧಿಸಿದಂತೆ ಎ-ಅನುಸೂಚಿತ ಸ್ವತ್ತಿನ ಕುರಿತಾದ ಮಾಲೀಕತ್ವವನ್ನು ಅಲ್ಲಗಳೆದಿರುತ್ತಾರೆ. ವಾದಿಯು ಹೇಳಿರುವಂತೆ ಬಿ-ಅನುಸೂಚಿತ ಸ್ವತ್ತು ಎ-ಅನುಸೂಚಿತ ಸ್ವತ್ತಿನ ಒಂದು ಭಾಗವಾಗಿರುತ್ತದೆ. ಹಾಗಾಗಿ ಪ್ರತಿವಾದಿಯು ತೆಗೆದುಕೊಂಡಂತಹ ನಿಲುವುಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆ ಆತನದ್ದೇ ಆಗಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿಕೂಲ ಸ್ವಾಧೀನತೆಯ ಕುರಿತಾಗಿ ಪ್ರತಿವಾದಿಯು ಮಾಲೀಕತ್ವದ ಹಕ್ಕನ್ನು ಕೋರಿದ್ದಾಗ್ಯೂ ಸಹ ಆ ಕುರಿತಾಗಿ ಪ್ರತಿಹಕ್ಕು ದಾವೆಯ ಪರಿಹಾರವನ್ನು ಕೋರಿರುವುದಿಲ್ಲ.

14. ಅಂತೆಯೇ ಪ್ರತಿಹಕ್ಕು ಸ್ವಾಧೀನತೆಯ ಕುರಿತು 7ನೇ ಪ್ರತಿವಾದಿಯು ಕಾನೂನಿನ ಪರಿಕಲ್ಪನೆಯ ಅಡಿಯಲ್ಲಿ ತನ್ನ ಪಾಲಿನ ಹೊಣೆಗಾರಿಕೆಯನ್ನು ರುಜುವಾತುಪಡಿಸಬೇಕಾಗುತ್ತದೆ. ಅಂತೆಯೇ ಪ್ರಸ್ತಾವಿತ ತಿದ್ದುಪಡಿಯಲ್ಲಿನ ಅಂಶಗಳು ಕಾಲಪರಿಮಿತಿಗೆ ಒಳಪಟ್ಟಿರುವ ಕುರಿತು ಕೂಡ ಪ್ರತಿವಾದಿಯು ರುಜುವಾತು ಪಡಿಸಬೇಕಾಗುತ್ತದೆ. ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಪ್ರಸ್ತಾವಿತ ತಿದ್ದುಪಡಿಯನ್ನು ಮಾಡಲು ಪ್ರತಿವಾದಿಗೆ ಅನುವು ಮಾಡಿಕೊಡಲಾಗುತ್ತದೆ. ಅಂತೆಯೇ ಪ್ರತಿವಾದಿಯು ಪ್ರಸ್ತಾವಿತ ತಿದ್ದುಪಡಿಯ ಕುರಿತು ತಿದ್ದುಪಡಿ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರದಲ್ಲಿ ವಾದಿಗೆ ಸದರಿ ಪ್ರಸ್ತಾವಿತ ತಿದ್ದುಪಡಿಯ ಕುರಿತು ಪ್ರತ್ಯುತ್ತರ ಪತ್ರವನ್ನು ಸಲ್ಲಿಸಲು ಅವಕಾಶ ಇರುತ್ತದೆ. ಹಾಗಾಗಿ ವಿಳಂಬಕಾರಿಯಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಹಾಗೂ ಕಾನೂನಿನ ಅಂಶವನ್ನು ಪಾಲನೆ ಮಾಡಿಲ್ಲ ಎಂಬ ಆಧಾರದಲ್ಲಿ ಅರ್ಜಿಯನ್ನು ತಿರಸ್ಕರಿಸಲು ಬರುವುದಿಲ್ಲವೆಂದು ನಿರ್ಣಯಕ್ಕೆ ಬರಲಾಗುತ್ತದೆ. ಈ

ಕುರಿತು ವಾದಿ ಪರ ವಕೀಲರು ಸದರಿ ಪರಿಹಾರವು ಕಾಲಪರಿಮಿತಿಯನ್ನು ಮೀರಿರುವುದರಿಂದ ಸದರಿ ಪರಿಹಾರವನ್ನು ಕೋರಲು ಬರುವುದಿಲ್ಲವೆಂದು ವಾದವನ್ನು ಮಂಡಿಸಿರುತ್ತಾರೆ. ಆದರೆ ಸದರಿ ಪರಿಹಾರವನ್ನು ಪಡೆಯುವ ಕುರಿತು ಉಭಯ ಪಕ್ಷಗಾರರ ಸಾಕ್ಷಿ ವಿಚಾರಣೆ ನಂತರ ಅಂತಿಮ ಹಂತದಲ್ಲಿ ನಿರ್ಣಯಿಸಬೇಕಾಗುತ್ತದೆ. ಅಲ್ಲದೇ ಪ್ರತಿಕೂಲ ಸ್ವಾಧೀನತೆಯ ಕುರಿತು ಪ್ರಸ್ತಾವಿತ ತಿದ್ದುಪಡಿಯಲ್ಲಿ ನಮೂದಿಸಿರುವುದರಿಂದ ಪ್ರತಿವಾದಿಗೆ ತನ್ನ ಪ್ರತಿವಾದವನ್ನು ಸಾಬೀತುಪಡಿಸಲು ಅವಕಾಶವನ್ನು ನೀಡುವುದು ನೈಸರ್ಗಿಕ ನಿಯಮಕ್ಕೆ ಅನುಸಾರವಾಗಿ ಮತ್ತು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಹಾಗೂ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯಲು ಪೂರಕವಾಗಿರುತ್ತದೆ. ಆದ್ದರಿಂದ ಪ್ರತಿವಾದಿಯು ಪ್ರಸ್ತಾವಿತ ತಿದ್ದುಪಡಿಯಲ್ಲಿ ಕೋರಿರುವ ತಿದ್ದುಪಡಿಯನ್ನು ಪುರಸ್ಕರಿಸುವುದು ಸೂಕ್ತವೆಂದು ನಿರ್ಣಯಿಸಲಾಗುತ್ತದೆ. ಆದರೆ ಸದರಿ ಈ ಅರ್ಜಿಯನ್ನು ಸಲ್ಲಿಸಲು ಪ್ರತಿವಾದಿಯು 3 ವರ್ಷಗಳ ವಿಳಂಬ ಮಾಡಿರುವ ಕಾರಣದಿಂದ ಸದರಿ ವಿಳಂಬದಿಂದ ವಾದಿಯ ದಾವೆಯ ವಿಲೇವಾರಿಗೆ ವಿಳಂಬ ಉಂಟಾಗಿರುವುದರಿಂದ ಪ್ರತಿವಾದಿಯು ವಾದಿಗೆ ರೂ.1,000/- ಖರ್ಚನ್ನು ಪಾವತಿಸಬೇಕೆಂದು ನ್ಯಾಯಾಲಯವು ನಿರ್ದೇಶಿಸುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪುರಸ್ಕರಿಸಿ ಅಂಶ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗುತ್ತದೆ.

15. <u>ಅಂಶ – 2</u> : ಮೇಲ್ಕಾಣಿಸಿದ ಎಲ್ಲಾ ಕಾರಣಗಳ ಮೇಲಿಂದಾಗಿ ಈ ಕೆಳಕಾಣಿಸಿದಂತೆ ಆದೇಶಿಸಿರುತ್ತೇನೆ :

<u>ಆ ದೇ ಶ</u>

ಪ್ರತಿವಾದಿ/ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ - 6 ನ್ನು ರೂ.1,000/- ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಪ್ರಕರಣವನ್ನು ಪ್ರತಿವಾದಪತ್ರದ ತಿದ್ದುಪಡಿಗಾಗಿ ಹಾಗೂ ತಿದ್ದುಪಡಿ ಪ್ರತಿವಾದಪತ್ರವನ್ನು ಸಲ್ಲಿಸಲು ನಿಗದಿಪಡಿಸಿ ದಿನಾಂಕ 22.06.2020 ಕ್ಕೆ ಪ್ರಕರಣವನ್ನು ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 11 ನೇ ಜೂನ್ 2020 ರಂದು ನಾನು ಉದ್ಘೋಷಿಸಿದ್ದೇನೆ.)

ಸಹಿ
(ರಘುರಾಮ.ಎನ್.ಎಸ್.)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕಡೂರು.